# ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ
## ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆ 2023
## ವಿಷಯ : ಐಚ್ಛಿಕ ಕನ್ನಡ (16)
## ಮಾದರಿ ಉತ್ತರ ಪತ್ರಿಕೆ

| ಪ್ರಶ್ನೆ ಸಂಖ್ಯೆ | ಕೀಲಿಕೈ ಉತ್ತರಗಳು | ಅಂಕ |
|---|---|---|
| 1 | ಆ) ಮುಖ | 1 |
| 2 | ಇ) ಆಕಾಶ – ಗಗನ | 1 |
| 3 | ಆ) ಖುಷಿ – ಕೋಪ | 1 |
| 4 | ಈ) ನಿಚ್ಚ | 1 |
| 5 | ಆ) ನಾಗ + ಆಭರಣ | 1 |
| 6 | ಇ) ಬೇಗಬೇಗ | 1 |
| 7 | ಈ) ಕುಗ್ಗು | 1 |
| 8 | ಆ) ಮಡಕೆ ಮಾಡುವುದು | 1 |
| 9 | ಆ) ಮಾಯೆ | 1 |
| 10 | ಅ) ಬರೆವಾತ | 1 |
| 11 | ಆ) ಹದಿಬದೆಯ ಧರ್ಮ | 1 |
| 12 | ಇ) ಓಕುಳಿಯನ್ನು ಚೆಲ್ಲುತ್ತಾ | 1 |
| 13 | ಈ) ಶಿವ | 1 |
| 14 | ಇ) ರೈತ | 1 |
| 15 | ಆ) ಕುವೆಂಪು | 1 |
| II | ಹೊಂದಿಸಿ ಬರೆಯಿರಿ | |
| 16 | ಶಿವ | 1 |
| 17 | ಭೂಮಿ | 1 |
| 18 | ಕಾಳು | 1 |
| 19 | ಕಾಪಾಡು | 1 |
| 20 | ಪ್ರಾಣ | 1 |
| III | ಒಂದು ವಾಕ್ಯದ ಉತ್ತರಗಳು | |
| 21 | ನೀಳಾಂಜನೆ | 1 |
| 22 | ಅರ್ಜುನನ ಬಾಣದಿಂದ | 1 |
| 23 | ಮರ್ತ್ಯಲೋಕ / ಭೂಲೋಕಕ್ಕೆ / ಗುಂಡಯ್ಯನ ಮನೆಗೆ | 1 |
| 24 | ಅಲ್ಲಮಪ್ರಭು | 1 |
| 25 | ದಣಿವಿಲ್ಲದಿರುವುದೇ ರೋಗ | 1 |
| 26 | ಹಸನಾಗಿ/ಚೆನ್ನಾಗಿ ದುಡಿದಾಗ | 1 |
| 27 | ಕಣ್ಣು ಕಾಣದ ಗಾವಿಲರು | 1 |
| 28 | ನಾಗವೇಣಿ / ನಾಗಿ | 1 |
| 29 | ರೈತ | 1 |
| 30 | ಎಡಬಿಡದೆ | 1 |
| IV | ಎರಡು–ಮೂರು ವಾಕ್ಯದ ಉತ್ತರಗಳು | |
| 31 | ವಿರೂಪಾಕ್ಷನ ಉಪೇಕ್ಷೆಯಿಂದ | 2 |
| 32 | ಗುಂಡನ ಹೃದಯದಲ್ಲಿ ಆಡುತ್ತಿದ್ದೆ | 2 |
| 33 | ರಸಭರಿತವಾದ ಕಬ್ಬನ್ನು ಆನೆ ತಿನ್ನುತ್ತದೆ<br>ಕಬ್ಬಿನ ಮೇಲಿನ ಗರಿಯನ್ನು ಕುರಿಗಳು ಮೆಲ್ಲುತ್ತವೆ. | 2 |
| 34 | ಕೆಲಸವನ್ನು ಆಡಿ ಮಾಡುವವನು ಮಧ್ಯಮ | 2 |

| | | |
|---|---|---|
| | ಆಡಿಯೂ ಮಾಡದವನು ಅಧಮ | |
| **35** | ಮಗಳು, ಅಕ್ಕ–ತಂಗಿ, ಸೊಸೆ, ನಾದಿನಿ | 2 |
| **36** | ಉಡುಗೆ, ತೊಡುಗೆ, ವಡವೆ | 2 |
| **V** | **ಸಂದರ್ಭ ವಿವರಣೆ: ಪದ್ಯದ ಆಯ್ಕೆ ಹಾಗೂ ಕವಿಯ ಹೆಸರಿಗೆ ಒಂದು ಅಂಕ, ವಾಕ್ಯ ಬಳಕೆಯ ಸಂದರ್ಭ ಹಾಗೂ ಸ್ವಾರಸ್ಯ ವಿವರಣೆಗೆ ಎರಡು ಅಂಕ. ಸ್ವಾರಸ್ಯ ವಿದ್ಯಾರ್ಥಿಗಳ ವಿವೇಚನೆಯಂತೆ.** | |
| **37** | ಪೊಸಯಿಸಿದಳಾಕೆ ನಾಟ್ಯಾಗಮುಮಂ – ಪಂಪ<br>ದೇವೇಂದ್ರನು ಮುಂದೆ ಜಿನನಾಗುವ ವೃಷಭನಾಥನನ್ನು ಸಂತೋಷಪಡಿಸಲು ಏರ್ಪಡಿಸಿದ ನೃತ್ಯಸಭೆಯಲ್ಲಿ ಅನುಪಮವಾದ ನೃತ್ಯವನ್ನು ಮಾಡುತ್ತಿದ್ದ ನೀಳಾಂಜನೆಯ ಆಯಸ್ಸು ಮುಗಿದ ಸಂದರ್ಭ. ದೇಹದ ಅನಿತ್ಯತೆಗೆ ನಾಡು ಆಶ್ಚರ್ಯಪಟ್ಟಿತು ಎಂದು ಕವಿ ಹೇಳುತ್ತಾನೆ. | 3 |
| **38** | ಆಡಿದನಾಡಿನಾಹಾ ಶಂಕರ – ಹರಿಹರ<br>ಕಾಯಕ ತತ್ವದ ಗುಂಡಯ್ಯನ ಮಡಕೆ ದನಿ ಮತ್ತು ಭಕ್ತಿಗೆ ಮೆಚ್ಚಿ ಶಿವ ಕುಣಿದಾಗ ಸುರಲೋಕದ ವಾದ್ಯಗಳು ಬಂದಾಗ ಶಿವ ಗುಂಡಯ್ಯನ ಮಡಕೆಯ ದನಿಯೇ ಸಾಕು ಎಂದು ಹೇಳಿದ ಸಂದರ್ಭ. | 3 |
| **39** | ಕಾಳುಮತಿಗಳಿಗೆನಿತು ಬುದ್ಧಿಯ ಹೇಳಿದರೆ ಫಲವೇನು? – ಚಾಮರಸ<br>ಮಾಯೆಯ ಪ್ರೀತಿಯನ್ನು ನಿರಾಕರಿಸಿದ ಅಲ್ಲಮನಿಗೆ ವಿಮಳೆ ಪ್ರೀತಿಯ ರಾಯಭಾರಿಯಾಗಿ ಬಂದು ಮಾಯೆಯ ಪರವಾಗಿ ವಿನಂತಿ ಮಾಡಿಕೊಳ್ಳುವ ಸಂದರ್ಭ. ವಿಮಳೆ ಅಲ್ಲಮನಿಗೆ ನಿನ್ನ ಕರುಣೆ ಮಾಯೆಯ ಪ್ರಾಣ ಎಂದು ಹೇಳುತ್ತಾಳೆ. | 3 |
| **40** | ಕೊಲ್ವುದು ಧರ್ಮವೇ ಕಳುವುದು ನೀತಿಯೇ? – ಚಿಕ್ಕುಪಾಧ್ಯಾಯ<br>ಕನ್ನಡದ ಬಗೆಗಿನ ಪ್ರೀತಿಯನ್ನು ಹೇಳುತ್ತಾ ಕವಿ ಹಳಗನ್ನಡವು ಪ್ರೀತಿಗೆ, ಚಂದಕ್ಕೆ ದೇಸಿಯಾದ ಅಚ್ಚಗನ್ನಡಕ್ಕೆ ಬೇರೆ ಸಾಟಿ ಉಂಟೆ ಎಂದು ಹೇಳುವ ಸಂದರ್ಭ. | 3 |
| **41** | ಹಸನಾಗಿ ದುಡಿದರೆ ಅಶನ ವಸನಗಳು – ಸರ್ವಜ್ಞ<br>ದುಶ್ಚಟಗಳ ಪರಿಣಾಮವನ್ನು ಹೇಳುತ್ತಾ ಕವಿ ಸೇಂದಿಯನ್ನು ಸೇವಿಸುವವನು ಹಂದಿಯಂತೆ; ಹಂದಿಯಾದರೂ ಉಪಕಾರಿ; ಕೆಲವು ಬಾರಿ ಕುಡುಕ ಹಂದಿಗಿಂತಲೂ ಕಷ್ಟ ಎಂದು ಹೇಳುವ ಸಂದರ್ಭ. | 3 |
| **VI** | **ವಿವರವಾದ ಉತ್ತರಗಳು** | |
| **42** | ತಪಸ್ಸು ಮಾಡುತ್ತಿದ್ದ ಅರ್ಜುನನ್ನು ಪರೀಕ್ಷಿಸಲು ಬೇಡನ ವೇಷಧಾರಿಯಾಗಿ ಬಂದ ಶಿವ – ಹಂದಿಗಾಗಿ ಬೇಡನೆಂದು ತಿಳಿದು ಅರ್ಜುನ ಶಿವನ ಜೊತೆಯೇ ಕಾಳಗ – ಸೋತ ಅರ್ಜುನ ತನ್ನ ಸೋಲಿಗೆ ತಾನು ದೈವವನ್ನು ಮರೆತದ್ದೇ ಕಾರಣ ಎಂದರಿತು ಮರಳಿ ಲಿಂಗಕ್ಕೆ ಪೂಜೆ – ಮರಳ ಲಿಂಗದ ಹೂಗಳು ಬೇಡನಿಗೆ ಅರ್ಪಿತ – ಬೇಡನೇ ಶಿವನೆಂದು ಅರಿತ ಅರ್ಜುನನಿಗೆ ಹೃದಯದ ಬಾಗಿಲು ತೆರೆದಂತೆ – ಜುಮ್ಮನೆ, ಮೈನವಿರೇಳಿ, ಬೆವರಿ, ಯುದ್ಧದ ಬಯಕೆ ದೂರವಾಗಿ ಭೀತಿ, ಕೌತುಕ ಹಬ್ಬಿ ಆಶ್ಚರ್ಯ ಚಕಿತನಾಗಿ ಪ್ರಕಾಶ ಪಶುಪತಿಗೆ, ಪರಾಶಕ್ತಿಗೆ ಬಾಣ ಪ್ರಯೋಗಿಸಿದೆನೆ, ಈತನನ್ನು ಕಾಡಿನ ಬೇಡ ಎಂದುಕೊಂಡೆನೆ ಎಂದು ತನ್ನ ಅಜ್ಞಾನ ಭಾವಕ್ಕೆ ಮರುಗಿ ಸೌಜನ್ಯಕ್ಕೆ ವಿಧೂರನಾದೆನೇ ಎಂದು ಪಶ್ಚಾತ್ತಾಪ ಪಡುತ್ತಾನೆ. | 4 |
| **43** | ಮಾಯೆಯ ಪ್ರೀತಿಯನ್ನು ಅಲ್ಲಮನಿಗೆ ಹೇಳಲು ಬಂದ ವಿಮಳೆ ಮತ್ತು ಅಲ್ಲಮರ ಸಂವಾದ – ವಿಮಳೆಯ ಪ್ರಶ್ನೆಗಳಿಗೆ ತರ್ಕಕ್ಕೆ ಪ್ರತಿ ಉತ್ತರ ತರ್ಕ ಕೊಟ್ಟ ಅಲ್ಲಮ ಹೇಳುತ್ತಾನೆ – ನೀರಿಗೆ ಹೆಪ್ಪನ್ನೆರೆದರೆ ಹಾಲಿನಂತೆ ಮೊಸರಾಗುವುದೇ? ಹಾಗೆ ಕಾಳುಮತಿಗೆ ಬುದ್ಧಿಯ ಹೇಳಿದರೆ ಫಲವಿಲ್ಲ – ಕಬ್ಬಿಣಕ್ಕೆ ಸ್ಪರ್ಶಮಣಿಯ ನಂಟಾದರೆ ಚಿನ್ನವಾಗುವ ಹಾಗೆ ನಿನ್ನ ಸಮೇಳ ಘಟಿಸಿದರೆ ಮಾಯೆಯೂ ಬದಲಾಗುತ್ತಾಳೆ ಎನ್ನುವ ವಿಮಳೆಯ ಸಮರ್ಥನೆ – ಅಲ್ಲಮ ಕಬ್ಬಿಣವಾದರೆ ಸರಿ ಹಳೆ ಹಂಚು ಚಿನ್ನವಾಗದು, ಚಂಚಲೆ ಮಾಯೆ, ಅವಳು ಬದಲಾಗಳು ಎನ್ನುತ್ತಾನೆ. – ವಿಳಾಸದ ಮಾತು ಬೇಡ ಕರುಣೆಯಲ್ಲಿ ಮಾಯೆಯನ್ನು ಕಾಯಿ ಎಂದರೆ ಒಂದು ಬೀಜ ಬಿತ್ತಿ ಮತ್ತೊಂದು ಫಲವ ಬಯಸಲಾಗದು. ಮದದ ತಾಮಸದಲ್ಲಿ ಭಕ್ತಿ ಬರದು ಎನ್ನುತ್ತಾನೆ. ಹೀಗೆ ವಿಮಳೆಯ | 4 |

| | | |
|---|---|---|
| | ಪ್ರತೀ ಮಾತನ್ನೂ ಖಂಡಿಸುತ್ತಾ ಉತ್ತರಿಸುತ್ತಾನೆ. | |
| **44** | ಸರ್ವಜ್ಞನು ತನ್ನ ತ್ರಿಪದಿಗಳಲ್ಲಿ ಉತ್ತಮ ನಡವಳಿಕೆ, ಲೋಭ, ದುರ್ವ್ಯಸನಗಳ ದುಷ್ಪರಿಣಾಮ, ದಯೆ ಕರುಣೆ, ಅನುಕಂಪ ಇದ್ದರೆ ಹೃದಯದಲ್ಲಿ ದೇವರು ಇರುತ್ತಾನೆ. ಇಂದ್ರೀಯ ನಿಗ್ರಹ, ಭ್ರಾತೃತ್ವ, ಕಾಯನಿಷ್ಠೆ, ಆಡಳಿತ ವ್ಯವಸ್ಥೆಯ ನಡುವೆ ಸಮತೆ – ಹೊಲೆಯ ಯಾರು? ಹೆಣ್ಣಿನ ಘನತೆ ಇನ್ನೂ ಮುಂತಾದ ವಿಷಯಗಳನ್ನು ಒಳಗೊಂಡ ತ್ರಿಪದಿಯ ಪದ್ಯಗಳನ್ನು ವಿವರಿಸಬೇಕು. | 4 |
| **45** | ಸತಿ – ಇನಿಯನ ಮನೆಯಲ್ಲಿ ಹಗೆ ಸಾಧಿಸಿ ಬಯ್ದರೆ ತಾಳ್ಮೆಯಿಂದ ಅವರನ್ನು ಒಲಿಸಿಕೊಳ್ಳಬೇಕು. ಮುಖ ಗಂಟು ಹಾಕಿಕೊಳ್ಳಬಾರದು. ಸಿರಿಯಿಂದ ಹಿಗ್ಗಿ ಮೇರೆ ಮೀರಬಾರದು. ಊಳಿಗದ ಸೇವಕರನ್ನೂ ಕೂಡ ಸೈರಣೆಯಿಂದ ಸಂತೈಸಬೇಕು.<br>ಪತಿ ಪ್ರೀತಿಯಿಂದ ಏರುಜವ್ವನದ ಕುಲಸತಿಯೊಂದಿಗೆ ಕೋಪಿಸದೆ ಕಷ್ಟ ಕೊಡದೆ ಅನುಸರಿಸಿ, ಅರಿಯದ ಅವಳನ್ನು ಮತ್ಸರಿಸದೆ ಮೌನವಾಗಿರದೆ ಸಮ್ಮಾನಿಸಬೇಕು – ಇಳಿಜವ್ವನದಲ್ಲೂ ಕೂಡ ಸ್ನೇಹದಿಂದ ಇರಬೇಕೆಂದು ಸಂಚಿಯ ಹೊನ್ನಮ್ಮ ಅಭಿಪ್ರಾಯ ಪಡುತ್ತಾಳೆ. | 4 |
| **VII** | **ಭಾವಾರ್ಥ : ಪದ್ಯದ ಭಾವಾರ್ಥ :ಪದ್ಯದ ಹೆಸರು – ಕವಿ ಹೆಸರು, ಹಿನ್ನೆಲೆ ಸಂದರ್ಭ – 2 ಅಂಕ, ಸ್ವಾರಸ್ಯ ಹಾಗೂ ಭಾವಾರ್ಥ – 2 ಅಂಕ.** | |
| **46** | ಆದಿಪುರಾಣ – ಪೊಸಯಿಸದಳಾಕೆ ನಾಟ್ಯಾಗಮಮಂ – ಪಂಪ<br>ದೇವೇಂದ್ರ ವೃಷಭದೇವನಿಗಾಗಿ ಏರ್ಪಡಿಸಿದ್ದ ನೃತ್ಯಸಭೆಯ ಹಿನ್ನೆಲೆ – ಪ್ರೇಕ್ಷಕರನ್ನು ಮನಸೂರೆ ಮಾಡಿದ ನೃತ್ಯಗಾರ್ತಿ ನೀಳಾಂಜನೆಯ ಅಂತ್ಯವನ್ನು ತನು, ರೂಪ, ವೈಭವ, ಯೌವ್ವನ, ಧನ, ಸೌಭಾಗ್ಯ, ಆಯಸ್ಸು ಎಲ್ಲವೂ ಮಿಂಚಿನಂತೆ ಕ್ಷಣಿಕ. ನೀರಿನ ಮೇಲಿನ ಗುಳ್ಳೆಯಂತೆ ಎಂದು ಹೋಲಿಸಿ ವಿವರಿಸುವ ಪದ್ಯ. | 4 |
| **47** | ರಂಗಧಾಮ ನೀತಿ ಶತಕ – ಕೊಲ್ವುದು ಧರ್ಮವೇ ಕಳುವುದು ನೀತಿಯೇ?– ಸಾಂಗತ್ಯ – ಚಿಕ್ಕುಪಾಧ್ಯಾಯ<br>ಯಾರೊಂದಿಗೆ ಅತೀ ವಿಶ್ವಾಸ ಇರಬಾರದೆಂಬ ಲೋಕನೀತಿಯನ್ನು ವಿವರಿಸುವ ಪದ್ಯ – ಮದವೇರಿದ ಆನೆ, ಕೆಟ್ಟ ಹೆಂಗಸು, ಹಾವು, ಹರಿವ ನದಿ, ಬೆಂಕಿ, ಪಕ್ಕದ ದಡ್ಡ, ಇವೆಲ್ಲದರ ಜೊತೆಗೆ ವಿಶ್ವಾಸ ಉಚಿತವಲ್ಲ ಎನ್ನುತ್ತಾನೆ ಕವಿ. | 4 |
| **VIII** | **ಎರಡು–ಮೂರು ವಾಕ್ಯದ ಉತ್ತರಗಳು** | |
| **48** | ತಂದೆ – ಊರುಕೇರಿ ಅಲೆದು, ತಾಯಿ – ಅಲ್ಲಿ ಇಲ್ಲಿ ಕರೆದು ಹುಡುಕಿದರು. | 2 |
| **49** | ಹಸಿರು ಸೀರೆ, ನೀಲಿ ಸೀರೆ, ಜರಿಯ ಸೆರಗು ಸೀರೆ | 2 |
| **50** | ಹಿಟ್ಟು ಚೆಲ್ಲಿದಂತೆ ಚಂದ್ರನ ಬೆಳದಿಂಗಳು ಸುರಿವ ಮಂಜು ಮೌನ ಕಣಿವೆ. ವಿವರಣೆ. | 2 |
| **IX** | **ಸಂದರ್ಭ ವಿವರಣೆ: ಪದ್ಯದ ಆಯ್ಕೆ ಹಾಗೂ ಕವಿಯ ಹೆಸರಿಗೆ ಒಂದು ಅಂಕ, ವಾಕ್ಯ ಬಳಕೆಯ ಸಂದರ್ಭ ಹಾಗೂ ಸ್ವಾರಸ್ಯ ವಿವರಣೆಗೆ ಎರಡು ಅಂಕ. ಸ್ವಾರಸ್ಯ ವಿದ್ಯಾರ್ಥಿಗಳ ವಿವೇಚನೆಯಂತೆ.** | |
| **51** | ಸು.ರಂ. ಎಕ್ಕುಂಡಿ – ನಾಗಿಯ ಕಥೆ<br>ತೇರಿಗೆ ಹೊರಟ ನಾಗಿ ದಾರಿಯಲ್ಲಿ ಕಂಡ ಬೆಕ್ಕನ್ನು ಕಂಡು ತಾಯಿಗೆ ಹೇಳುವ ಮಾತಿನ ಸಂದರ್ಭ – ಸ್ವಾರಸ್ಯ – ಬೆಕ್ಕಿನ ಸಾಂಕೇತಿಕತೆ | 3 |
| **52** | ಸು.ರಂ. ಎಕ್ಕುಂಡಿ – ನಾಗಿಯ ಕಥೆ<br>ತೇರಿನ ಜಾತ್ರೆಯಲ್ಲಿ ಸೀರೆ ಮಾರುವ ಚಿಗುರು ಮೀಸೆಯ ಯುವಕನನ್ನು ನಾಗಿ ನಿಂತು ನೋಡಿದ ಸಂದರ್ಭ.<br>ಸ್ವಾರಸ್ಯ – ಯೌವ್ವನದ ಆಕರ್ಷಣೆ | 3 |
| **X** | **ವಿವರವಾದ ಉತ್ತರಗಳು** | |
| **53** | ಊರಿನ ತೇರನ್ನು ಎಳೆಯುವ ಸಂಭ್ರಮದ ಜಾತ್ರೆಗೆ ನಾಗಿ ಹೋಗಲು ಅಂದು ಬೇಗ ಮಿಂದು ಹಣೆಯಲ್ಲಿ ದುಂಡು ಕುಂಕುಮವಿಟ್ಟು ಹಸಿರು ಸೀರೆ ತೊಟ್ಟು ಸಿದ್ಧಳಾದಳು. ಅವಳನ್ನು ನೋಡಿದ ಕರುವೂ ಕೂಡ ನಾಚಿತು. ತಾಯಿಯನ್ನು ಕರೆದುಕೊಂಡು ನಾಗಿ ಜಾತ್ರೆಗೆ ಹೋದ ಸಂದರ್ಭದ ವಿವರಣೆ. | 4 |

| | | |
|---|---|---|
| **54** | ಬೆಕ್ಕು ಬರುವುದಲ್ಲ ಮಗೂ, ಹಾಲು ಮಡಕೆ ಮುಚ್ಚಿಡು ಎಂದು ಪ್ರಾರಂಭವಾಗುವ ಪದ್ಯ. ನಂತರ ನಾಗಿಯ ದುರಂತದೊಂದಿಗೆ ಕೊನೆಯಾಗಿದೆ. ಇಲ್ಲಿ ಹಾಲು ಹೆಣ್ಣಾಗಿ, ಹಾಲನ್ನು ಹೊಂಚಿಹಾಕುವ ಬೆಕ್ಕಾಗಿ ಯುವಕ/ಗಂಡಸು ರೂಪಕವಾಗಿದೆ. ಪದ್ಯದುದ್ದಕ್ಕೂ ಬರುವ ಬೆಕ್ಕು ಮತ್ತು ಯುವಕನ ಸಂದರ್ಭಗಳ ವಿವರಣೆ. | 4 |
| **XI** | **ಎರಡು-ಮೂರು ವಾಕ್ಯದ ಉತ್ತರಗಳು** | |
| **55** | ಹರಿ ಮತ್ತು ಅಲ್ಲಾ | 2 |
| **56** | ಹಣ್ಣು, ಕಾಯಿ, ಹೂವು, ಕರ್ಪೂರ, ಕುಂಕುಮ | 2 |
| **57** | ಜಲಗಾರ ಕಾಶೀಯಾತ್ರೆ, ಗಯಾಪುರಿ, ಜಾತ್ರೆಯನ್ನು ಒಲ್ಲೆ ಎನ್ನುತ್ತಾನೆ. | 2 |
| **XII** | **ಸಂದರ್ಭ ವಿವರಣೆ: ಪಠ್ಯದ ಆಯ್ಕೆ ಹಾಗೂ ಲೇಖಕರ ಹೆಸರಿಗೆ ಒಂದು ಅಂಕ, ವಾಕ್ಯ ಬಳಕೆಯ ಸಂದರ್ಭ ಹಾಗೂ ಸ್ವಾರಸ್ಯ ವಿವರಣೆಗೆ ಎರಡು ಅಂಕ. ಸ್ವಾರಸ್ಯ ವಿದ್ಯಾರ್ಥಿಗಳ ವಿವೇಚನೆಯಂತೆ.** | |
| **58** | ಕುವೆಂಪು – ಜಲಗಾರ<br>ಕಾಯಕನಿರತನಾದ ಜಲಗಾರನನ್ನು ಶಿವಗುಡಿಯ ಜಾತ್ರೆಗೆ ಹೊರಟ ಯುವಕ ಜಾತ್ರೆಗೆ ಕರೆಯುವ ಸಂದರ್ಭ.<br>ಕಾಯಕ ತತ್ವ – ಸ್ವಾರಸ್ಯ | 3 |
| **59** | ಕುವೆಂಪು – ಜಲಗಾರ<br>ಗುಡಿಯಲ್ಲಿ ಪೂಜೆ ಮಾಡಲು ಹೊರಟ ಭಟ್ಟನನ್ನು ಕಣ್ಣು ಕಾಣದ ತಿರುಕ ಕಾಣದೆ ಮುಟ್ಟಿದಾಗ ಕೋಪದಿಂದ ಭಟ್ಟ ತಿರುಕನಿಗೆ ಬಯ್ದಾಗ ಹತಾಶನಾದ ತಿರುಕ ಹೇಳುವ ಮಾತಿನ ಸಂದರ್ಭ. | 3 |
| **60** | ಕುವೆಂಪು – ಜಲಗಾರ<br>ಶಿವ ಜಲಗಾರ ವೇಷಧಾರಿಯಾಗಿ ಬಂದು ನಾನು ನಿನ್ನಂತೆ ಈ ಜಗದ ಪಾಪ ತೊಳೆಯಲು ಬಂದಿದ್ದೇನೆ. ನನ್ನ ಜಾಗ ಬೀದಿ ಗುಡಿಸುವ/ಶ್ರಮಿಕನ ಎದೆ – ಕಾಯಕ ಯೋಗಿಗಳಲ್ಲಿ ನಾನು ನೆಲೆಯಾಗಿದ್ದೇನೆ ಎಂದು ಊರ ಜಲಗಾರನಿಗೆ ಹೇಳುವ ಸಂದರ್ಭ. | 3 |
| **XIII** | **ವಿವರವಾದ ಉತ್ತರಗಳು** | |
| **61** | ಭೂದೇವಿಯು ತನಗೆ ಚೈತನ್ಯವನ್ನು ಕೊಡುವ ಉಷಃಕಾಲ/ ಬೆಳಗನ್ನು ಕರೆಯುತ್ತಾ ವರ್ಣಿಸುತ್ತಾಳೆ. ತನ್ನ ಸಖಿ ಎನ್ನುತ್ತಾ ಕೆಂಪಿನ ಮುತ್ತಿನ ಮಾಲೆ ತರುವ- ಮಂಜಿನ ಮುಸುಕನ್ನು ಸರಿಸುತ್ತಾ, ಉದಯಾಚಲವನ್ನು ಏರಿ, ಹಸುರಿನ ಬನಗಳ ಮುದ್ದಿಸಿ, ಗಿರಿಶೃಂಗಗಳ ಆಲಂಗಿಸಿ, ಮಂದಾನಿಲ ಬೀಸಿ, ಆನಂದವ ತಾ ಸಖಿ – ಮಂಜಿನ ಜಪಮಣಿ, ಸುಮಗಳು, ಕೆಂಪಿನ ಕುಂಕುಮ, ಹಸಿರಿನ ಸೀರೆ, ಪೈರಿನ ರಮಣೀಯತೆ, ಮುಗಿಲಿನಂಥ ಕೂದಲು, ವನಗಳ ಗಂಭೀರತೆ, ವಿಶ್ವಗರ್ಭದ ಚೆಲುವನ್ನು ಮೈತಳೆದು ಎಂದು ಪ್ರಕೃತಿಯನ್ನು ಹೆಣ್ಣಾಗಿ ಶೃಂಗರಿಸಿ ಉಷೆಯನ್ನು ಭೂದೇವಿ ಚಿತ್ರಿಸಿದ್ದಾಳೆ. | 4 |
| **62** | ಶಿವನ ಆಭರಣಗಳು – ಚಂದಿರ, ಗಂಗೆ, ಹಣೆಗಣ್ಣು, ಹಾವು/ಉರಗ, ಜನಿವಾರ, ಬೂದಿ, ಇವೆಲ್ಲವನ್ನು ಪುರೋಹಿತರು ಶಿವನಿಗೆ ಕೊಟ್ಟ ಕಾರಣದ ಹಿನ್ನೆಲೆಯನ್ನು ವಿವರಿಸಬೇಕು. ಶಿವ ತಾನು ಜಲಗಾರನಾಗಿದ್ದವನು ಇವೆಲ್ಲವನ್ನು ಧರಿಸಿ ಗುಡಿಯ ಶಿವನಾದ ಹಿನ್ನೆಲೆ ವಿವರಸಿಬೇಕು. | 4 |
| **XIV** | **ಟಿಪ್ಪಣಿಗಳು** | |
| **63** | ಪರಿನಿಷ್ಕ್ರಮಣ – ಪಂಚಕಲ್ಯಾಣಗಳಲ್ಲಿ ಒಂದು. ತೀರ್ಥಂಕರನಾಗುವವನು ತನ್ನ ಬಂಧುಗಳಿಂದ ಬೀಳ್ಕೊಂಡು ಗೃಹತ್ಯಾಗ ಮಾಡುವ ಸಂದರ್ಭ – ದೇವತೆಗಳು ಬಂದು ವೈರಾಗ್ಯ ದೃಢಪಡಿಸಿದರೆ ಇಂದ್ರಾದಿ ದೇವತೆಗಳು ಬರುತ್ತಾರೆ. | 2 |
| **64** | ಹರಿಹರ – 13 ನೇ ಶತಮಾನ – ಕ್ರಾಂತಿಕಾರಿ ಕವಿ – ತಂದೆ – ಮಹಾದೇವ, ತಾಯಿ – ಶರ್ವಾಣಿ, ಗುರು-ಮಾಯಿದೇವ – ಹಂಪೆಯಲ್ಲಿ ನೆಲೆಸಿ 64 ರಗಳೆಗಳ ರಚನೆ. ಚಂಪೂ, ಶತಕ, ಅಷ್ಟಕಗಳನ್ನು ಬರೆದಿದ್ದಾನೆ. ಶಿವಭಕ್ತರು ಈತನ ರಗಳೆಗಳ ನಾಯಕ- | 2 |

<table>
<tr><td></td><td>ನಾಯಕಿಯರು.</td><td></td></tr>
<tr><td>65</td><td>ಸಾಗತ್ಯ – 5 ಶತಮಾನಗಳ ಇತಿಹಾಸವನ್ನು ಹೊಂದಿದ ಸಾಂಗತ್ಯ – ಇನ್ನೂರು ಕೃತಿಗಳ ರಚನೆ – ಅಂಶಗಣ ಛಂದಸ್ಸು – 4 ಚರಣ – ಹಾಡುಗಬ್ಬ – ಕನಕದಾಸ, ರತ್ನಾಕರವರ್ಣಿ, ಸಂಚಿಹೊನ್ನಮ್ಮ, ಹೆಳವನಕಟ್ಟೆ ಗಿರಿಯಮ್ಮ ಸಾಂಗತ್ಯದಲ್ಲಿ ಕಾವ್ಯ ರಚನೆ – ಹೊಸಗನ್ನಡ ಪ್ರಕಾರದಲ್ಲಿ ಮುಂದುವರಿಕೆ.</td><td>2</td></tr>
<tr><td>XV</td><td colspan="2">ಛಂದಸ್ಸು</td></tr>
<tr><td>66</td><td>– UU | – UU | – –<br>ಅಂಬರ | ಭೂಷಣ | ಮಾಲಾ<br>– UU | U U – | UUUU | – UU | UU–<br>ಡಂಬರ | ದ ಬೆಡಂ | ಗನಮರ | ನರ್ತಕಿ | ಗಡಮೇ<br>– U U | U U — | – UU<br>ನೆಂಬುದೊ | ಧರಣೇಂ | ದ್ರಂಗಮ<br>– – | U U– | U – U | – – | UU –<br>ಳುಂಬಂ | ಪೊಗಟ | ಲ್ಕೆ ರೂಪು | ನೀಲಾಂ | ಛನೆಯಾ<br>4–4–4<br>4–4–4–4 ಕಂದಪದ್ಯ</td><td>4</td></tr>
<tr><td>67</td><td>– UU | UU U U | – – | – U U<br>ಗುಂಡನ | ನಿಳಯದ | ಮುಂದಂ | ನಿಂದಿರೆ<br>– – | – UU | – – | UUUU<br>ಗುಂಡ | ಯ್ಯಂ ಸುಖ | ದಿಂ ಬಾ | ರಿಸುತಿರೆ<br>4–4–4–4 ಮಂದಾನಿಲ ರಗಳೆ – ಮೊದಲ ಪ್ರಕಾರ</td><td>4</td></tr>
<tr><td>XVI</td><td colspan="2">ಅಲಂಕಾರ</td></tr>
<tr><td>68</td><td>ಉಪಮೇಯ – ನಾಗಿಯ ರವಿಕೆ<br>ಉಪಮಾನ – ಇಂದ್ರಧನು<br>ಸಮಾನ ಧರ್ಮ – ಹೊಳೆವ<br>ಉಪಮಾ ವಾಚಕ – ಅಂತೆ<br>ಇಲ್ಲಿ ಉಪಮೇಯವಾದ ರವಿಕೆಯನ್ನು ಉಪಮಾನವಾದ ಇಂದ್ರಧನುವಿಗೆ ಹೋಲಿಸಿರಿವುದರಿಂದ ಇದು ಉಪಮಾಲಂಕಾರ.</td><td>4</td></tr>
<tr><td>69</td><td>ಯಮಕಾಲಂಕಾರ – ಮೂರು ಅಥವಾ ಅದಕ್ಕಿಂತ ಹೆಚ್ಚು ಅಕ್ಷರಗಳುಳ್ಳ ಪದ ಅಥವಾ ಪದಭಾಗ. ಪದ್ಯದ ಆದಿ, ಮಧ್ಯ ಅಥವಾ ಅಂತ್ಯದಲ್ಲಿ ನಿಯತವಾಗಿ ಬರುವುದೇ ಯಮಕಾಲಂಕಾರ.</td><td>4</td></tr>
<tr><td>XVII</td><td colspan="2">ಅನುವಾದ</td></tr>
<tr><td>70</td><td>ಅರ್ಜುನನು ಶಿವನೊಂದಿಗೆ ಮುಷ್ಠಿಯುದ್ಧವನ್ನು ಮಾಡಿದಾಗ ಅರ್ಜುನನಿಗೆ ಸೋಲುಂಟಾಯಿತು. ಹಲವು ರೀತಿಯಿಂದ ಪರಿತಪಿಸುತ್ತಾ ಹೀಗೆ ಹೇಳುತ್ತಾನೆ. ನಾನು ವಿರೂಪಾಕ್ಷನನ್ನು ಅಲಕ್ಷ್ಯ ಮಾಡಿದ್ದರಿಂದಲೇ ನನಗೆ ಈ ರೀತಿಯಾಗಿ ಸೋಲು ಉಂಟಾಯಿತು ಎಂದು ತನ್ನ ಅಂತರಂಗದಲ್ಲಿ ತಿಳಿದು ಕರುಣಾಸಾಗರಮೂರ್ತಿಯಾದ ಶಂಕರನಿಗೆ ಸೇವಕತನದಿಂದ ಶರಣಾಗಿ ಆತನ ಕರುಣೆಯನ್ನು ಪಡೆದು ವೈರಿಯನ್ನು ಜಯಿಸುತ್ತೇನೆ ಎಂದು ಅರ್ಜುನನು ಚಿಂತೆಯೆಂಬ ಕೆಸರನ್ನು ವಿವೇಕ ಎಂಬ ನೀರಿನಿಂದ ತೊಳೆದು ಪರಿಶುದ್ಧ ಮನಸ್ಸನ್ನು ಹೊಂದಿದವನಾಗುತ್ತಾನೆ.</td><td>4</td></tr>
</table>